“ಗುಡ್. ಹೊಸ ಸಂಸಾರಕ್ಕೆ ಹೊಸ ಮನೆ ನೋಡಿ ಆಯ್ತಾ?”

“ಆಯ್ತು. ಅಲ್ಲೇ ಆಫೀಸಿಗೆ ಹತ್ರದಲ್ಲೇ ಒಂದು ಫ್ಲಾಟ್ ತಗೊಂಡೆ. ಬಾಡಿಗೆ ಗೀಡಿಗೆಯ ರಗಳೆಯೆಲ್ಲ ಬೇಡ ಅಂತ.”

“ಎಷ್ಟಾಯ್ತು ಒಟ್ಟು?”

“ರಿಜಿಸ್ಟ್ರೇಶನ್ನೆಲ್ಲಾ ಸೇರಿ ಮೂವತ್ತೆಂಟು ಲಕ್ಷ ಆಯ್ತು. ಡೌನ್ ಪೇಮೆಂಟ್ ಇಪ್ಪತ್ತು ಮಾಡಿದೆ.”

ಅಪ್ಪ ಹಾಗೂ ಗೆಳೆಯನ ನಡುವೆ ನಡೆಯುತ್ತಿದ್ದ ಸಂಭಾಷಣೆ ತನ್ನ ಜಗತ್ತಿಗೆ ಸಂಬಂಧವೇ ಇಲ್ಲದ ಬೇರೆಯದೇ ಲೋಕದ್ದೇನೋ ಅನ್ನಿಸಿತು ರಾಜೀವನಿಗೆ. ಅವರಿಬ್ಬರೂ ಸಂಭಾಷಿಸುತ್ತಲೇ ಮನೆಯ ಹೊರಗಡೆ ಬಂದರು. ರಾಜೀವನೂ ಹಿಂಬಾಲಿಸಿದ. ಅವರ ಮಾತೀಗ ಅಂಗಳದಲ್ಲಿ ಠೀವಿಯಿಂದ ನಿಂತಿದ್ದ ವೇಣುವಿನ ಬೈಕಿನತ್ತ ತಿರುಗಿತು.

“ಒಟ್ಟು ಒಂದು ಲಕ್ಷದ ನಲವತ್ತಾಯ್ತು ಬೈಕಿಗೆ. ತಿಂಗಳು ತಿಂಗಳು ಇಎಮ್ಮೈ ರಗಳೆಯೆಲ್ಲ ಬೇಡ ಅಂತ ಒಂದೇ ಸಲಕ್ಕೆ ಪೇಮಾಡಿಬಿಟ್ಟೆ.”

ರಾಜೀವ ಬೈಕಿನತ್ತ ನಡೆದ. ಹೆಚ್ಚುಗಾರಿಕೆಯ ಚಿಹ್ನೆಯಂತೆ, ಸಮಾಜದ ಗೌರವದ ಪ್ರತೀಕದಂತೆ, ಭದ್ರತೆ ಸಾಧಿಸಿದ ಬದುಕಿನ ಪ್ರತಿಬಿಂಬದಂತೆ ಬೀಗುತ್ತಾ ನಿಂತಿದ್ದ ಅದನ್ನು ಮೆಲ್ಲನೆ ಸವರಿದ.

“ನಮ್ಮ ಪ್ರತೀಕ್ ಕೂಡಾ ಇದ್ನೇ ತಗೊಂಡಿದಾನೆ. ಫೇಸ್‌ಬುಕ್‌ನಲ್ಲಿ ಫೋಟೊ ಹಾಕಿದ್ದ. ನೋಡಿದ್ಯಾ?”

ವೇಣು ಪ್ರಶ್ನಿಸಿದ.

ಎಲ್ಲರೂ ಒಂದೇ ಶಾಲೆಯಲ್ಲಿ ಓದಿದವರು. ಅದೇ ಮರದ ಬೆಂಚಿನ ಮೇಲೆ ಕುಳಿತು, ಕಲಿತು ಎದ್ದು ಹೋದವರು. ತನ್ನ ಜಟಕಾಗಾಡಿಯಿನ್ನೂ ಅದದೇ ಕ್ಷುಲ್ಲಕ ಲೆಕ್ಕಾಚಾರಗಳ ಬೀದಿಯಲ್ಲಿ ಅಲೆಯುತ್ತಿರುವಾಗ ಇವರೆಲ್ಲರೂ ಎಲ್ಲೆಲ್ಲಿಗೆ ತಲುಪಿಬಿಟ್ಟರು!

“ಮತ್ತೆ... ನೀನ್ಯಾವಾಗ್ಲೋ ಮದುವೆ ಊಟ ಹಾಕ್ಸೋದು?”

ವೇಣು ಪ್ರಶ್ನಿಸಿದ.

“ಎಂಥಾ ಮದುವೆನೋ ಏನೋ. ಮೊದಲು ಮನೆ ರಿಪೇರಿ ಮಾಡ್ಸಿ, ಊರಲ್ಲೇ ಎಲ್ಲಾದ್ರೂ ಒಂದೆಕರೆ ಜಮೀನು ತಗೋಬೇಕಂತಿದೀನಿ. ಆ ಸಾಲ ಸ್ವಲ್ಪವಾದ್ರೂ ತೀರಿದಮೇಲೆ ಮದುವೆ ಗಿದುವೆ ಎಲ್ಲಾ.”

